ಬಡ್ಕಂಡ್ ನಗಂಗಾತು' ಎಂದು ಮನೆಯಲ್ಲಿ ಇಲ್ಲದ ಮಂಚದ ಬದಲು ಮಾಸಿದ ಆಪಿನ (ಜೊಂಡುಲ್ಲಿನ) ಚಾಪೆಗೆ ಮಕಾಡೆ ಮಲಗಿದಳು.

ರೊಡ್ಡಯ್ಯನ ಹೆಂಡತಿ ಪಿಳ್ಳಮ್ಮ ಸ್ವಂತ ಸೋದರಮಾವನ ಮಗಳು. ತೌರು ತಪ್ಪುತ್ತದೆಂಬ ಅವನ ಹೆತ್ತ ತಾಯಿ ಹಂಬಲದಂತೆ ಹಿರಿಯರು ಒಪ್ಪಿ ಮದುವೆ ಆದವಳು. ಕದ್ದೋಡಿ ಬಂದವಳು, ತನಗುಟ್ಟಿದ ಮಗು ಪರರಿಗೆ ಹುಟ್ಟಿಸಿಕೊಂಡೆ ಎಂಬ ಹೀನಾಮಾನದ ಮಾತಾಡಿದರೂ ರೊಡ್ಡಯ್ಯ ಸಮಾಧಾನದಿಂದ ಇರುವುದು ಎಲ್ಲರಿಗೂ ಅಚ್ಚರಿ ತಂದಿತ್ತು. ಮನೆಗೆ ಬಂದ ತಕ್ಷಣ ಕೈಕಾಲಿಗೆ ನೀರು ಕೊಡಲಿಲ್ಲ. ಉಂಡ ತಣಿಗೆ ಎತ್ತುವಾಗ ಎಂಜಲು ಸಿಡಿಸಿದಳು ಎಂಬ ಕ್ಷುಲ್ಲಕ ಕಾರಣಗಳಿಗೆ ಆಗಾಗ ಹೆಂಡತಿ ಮೈಮೇಲೆ ಗಳ ಆಡಿಸುತ್ತಿದ್ದ ರೊಡ್ಡಯ್ಯ ಇಂದು ಕಲ್ಲಾಗಿ ಕುಂತಿದ್ದ. ಅವನ ಮನಸ್ಸು ಕಲ್ಲಾಗಲು ತಾನು ಮಾಡಿದ ತಪ್ಪು ತಲೆಗೆ ಹತ್ತಿದ್ದು ಕಾರಣವಾಗಿತ್ತು. ತಾನು ಕೊಟ್ಟ ಕ್ವಾಟ್ಲೆಯನ್ನು ನಾಲ್ಕು ಗೋಡೆಯಾಚೆ ತರದ ಹೆಂಡತಿ ಬೀದಿಗೆ ಬಂದು ಹಾರಾಡಿದರೂ, ಹಲ್ಲಮ್ಮಡು ಕಚ್ಚಿ ತೆಪ್ಪಗೆ ಎಲ್ಲ ಸಹಿಸಿಕೊಂಡಿದ್ದ. ಇಲ್ಲದೋಗಿದ್ದರೆ ಈ ಹೊತ್ತಿಗೆ ಸಿಕ್ಕಿದ್ದು ಕೈಗೆ ಬಂದು ಹೆಂಡತಿಗೆ ಹಿಡಿದ ಗಾಳಿ ಬಿಡಿಸುತ್ತಿತ್ತು.

ಗಂಟಲು ಕೆಡದಿರಲೆಂದು ಏನೂ ತಿನ್ನದೆ ರಾತ್ರಿ ಒಂದಿಷ್ಟು ಬಟ್ಟಿ ಸಾರಾಯಿ ಬಾಯಿಗೆ ಬಿಟ್ಕಂಡಿದ್ದ. ಈಗ ಅದು ತನ್ನ ಪ್ರತಾಪ ತೋರಿ ಕಳ್ಳಿ ಹುತ್ತ ಕೆರದಂತೆ ಅವನ ಹೊಟ್ಟೆ ಗಬ್ಬರಿಸತೊಡಗಿತು. ಮುಖಕ್ಕೆ ಹಚ್ಚಿದ್ದ ಬಣ್ಣ ಸೀಮೆಣ್ಣೆ, ಕೊಬರಿ ಎಣ್ಣೆ ಎರಡೂ ಹಚ್ಚಿ ಎಷ್ಟು ತಿಕ್ಕಿದರೂ ಮುಖ ಬಿಟ್ಹೋಗದೆ ಕಿರಿ ಕಿರಿ ಮಾಡತೊಡಗಿತು. ಮೇಕೆ ಮಾರಿದ ಅಷ್ಟೂ ಹಣ ಪಾತ್ರಧಾರಿ ಕೈ ಸೇರಿ ಜೋಬೆಲ್ಲ ಬರಿದಾಗಿತ್ತು. ಎರಡು ತಿಂಗಳಿಂದ ಪಾತ್ರದೆಣ್ಣ ಮೈಮುಟ್ಟಲು ಪಕ್ಷಿಯಂತೆ ಕಾದಿದ್ದ. ಸಂತೆಯಲ್ಲಿ ಮೇಕೆ ಮಾರಿಕೊಂಡವನಿಗೆ ಹಗ್ಗ ಕೈಗಿಡುವಾಗ, ಮೇಕೆ ಮೈ ಸವರಿ ಪಾತ್ರದೆಣ್ಣಿನ ಬೆನ್ನೆಂದು ಭ್ರಮಿಸಿದ್ದ. ಬೇಕಂತಲೇ ಪಾತ್ರದೆಣ್ಣು ಉಟ್ಟಿದ್ದ ಮೇಕಪ್ಪಿನ ಬಟ್ಟೆ ಅಡ್ಡ ಬಂದು ಮೈ ಮುಟ್ಟುವ ಆಸೆ ಈಡೇರದಾಗಿ, ಕೊಟ್ಟ ಕಾಸು ಹರಿವ ನೀರಲ್ಲಿ ಹುಣುಸೆ ಹಣ್ಣು ತೊಳೆದಂತೆ ಆಯಿತು. ತಾನು ನಾಟಕದಲ್ಲಿ ಸತ್ತಂತೆ ಮಲಗಿರುವಾಗ ಪಾತ್ರದೆಣ್ಣು ಮೈ ಮುಟ್ಟುವಳೆಂಬ ದೂರದಾಸೆಯಿತ್ತು. 'ಓ ಪ್ರಿಯಾ ಪ್ರಶಾಂತ ಹೃದಯ ಹಾನಿ ಹೊಂದಿದೆಯಾ...' ಎಂದು ನೋಡುಗರ ಮನಕರಗುವಂತೆ ಹಾಡಿದ ಪಾತ್ರದೆಣ್ಣು, ದೂರದಲ್ಲೇ ನೆಲ ಮುಟ್ಟಿ ರೊಡ್ಡಯ್ಯನ ಉಳಿದೊಂದು ಆಸೆಯೂ ಕಮರಿ ಹೋಯಿತು. ರಾತ್ರಿಯಲ್ಲ ಎರಡು ರೆಪ್ಪೆ ಒಂದು ಮಾಡದೆ ಕಣ್ಣು ನಿದ್ದೆಗೆ ಎಳೆಯುತ್ತಿದ್ದರೆ, ಹೆಂಡತಿ ಕಟು ಮಾತು–ಕಣ್ಣೀರು; ನಾಟಕ ನೋಡಲು ಬಂದ ನೆಂಟರಿಷ್ಟರ ಮುಂದೆ ಮಾನ ಕಳೆದು, ಕ್ಷಣ ಕ್ಷಣವೂ ರೊಡ್ಡಯ್ಯನ ಭೂಮಿಗಿಳಿಸಿತು.

ಪಿಳ್ಳಮ್ಮನ ರೌದ್ರಾವತಾರಕ್ಕೆ ಮಕ್ಕಳು ಬೆದರಿ ನಿಂತಿದ್ದವು. ಒಂದು ಪಾವಲಿ ಮಾತ್ರ ಅದೆಂಗೋ ತಪ್ಪಿಸಿಕೊಂಡು ರೊಡ್ಡಯ್ಯನ ನಿಕ್ಕರ್ ಜೋಬಲ್ಲಿ ಮರೆತು ಮಲಗಿತ್ತು. ತಡಕಿ ತೆಗೆದ ರೊಡ್ಡಯ್ಯ ಮಕ್ಕಳ ಕೈಗಿತ್ತು, ಕಡ್ಲೆ ಬುರುಗು ತಿನ್ನಲು ಮೌನವಾಗೇ ಕೈ ಸನ್ನೆ ಮಾಡಿದ.

ಪಾವಲಿ ಕೈ ಸೇರಿದ್ದೇ ತಡ ಮಕ್ಕಳ ಮುಖದಲ್ಲಿ ಗೆಲುವು ಮೂಡಿ ಅಂಗಡಿ ಕಡೆ ಓಡಿದವು. ರೊಡ್ಡಯ್ಯ ತುಟಿ ಬಿಚ್ಚದೆ ಬಂಡೆಗಲ್ಲಂತೆ ಮೌನ ಮೈವೆತ್ತಂತಿದ್ದ.

***

## ಹಿರಿತಲೆ ಪುರಾಣ

ಚನ್ನಂಗಿದುರ್ಗದ ಉತ್ತರಕ್ಕೆ ಮರಿ ಹಿಮಾಲಯ ಪರ್ವತದಂತ ಬೆಟ್ಟ ಸಾಲಿದೆ. ಬೆಟ್ಟ ಸಾಲು ದಾಟಿ ಐದಾರು ಮೈಲಿ ನಡೆದರೆ ನೂರು ಮನೆಗಳ ಗೊಲ್ಲೇರಿ ಎಂಬ ಗ್ರಾಮವಿದೆ. ಗೊಲ್ಲೇರಿ ಅತ್ತ ಬಯಲು ಸೀಮೆಯೂ ಅಲ್ಲದ, ಇತ್ತ ಮಲೆನಾಡಿಗೂ ಸಲ್ಲದಂತಿದೆ. ಬೆಟ್ಟ ಸಾಲು ಟುಮಕಿಪುರದಿಂದ ಪ್ರಾರಂಭವಾಗಿ, ಕಮಲಪುರ ಸುತ್ತುವರಿದು ಚನ್ನಂಗಿದುರ್ಗ ಬಳಸಿ ಅಂಕುಡೊಂಕಾಗಿ ತೆಲುಗುನಾಡಿನತ್ತ ಚಾಚಿಕೊಂಡಿದೆ. ಬೆಟ್ಟ ಸಾಲಿನ ಒಡಲಲ್ಲಿ ಹಲವು ನದಿಗಳು ಹುಟ್ಟು ಪಡೆಯುತ್ತವೆ. ಗೊಲ್ಲೇರಿ ಗ್ರಾಮದ ಬೆನ್ನಿಗಿರುವ ಬೆಟ್ಟವನ್ನು ಹಿರೇ ಬೆಟ್ಟವೆಂದು ಕರೆಯುವರು. ಹಿರೇಬೆಟ್ಟ ದೂರದಿಂದ ನೋಡಿದರೆ ಜಟೆ ಕೆದರಿದ ಶಿವನು ತಪ್ಪಸ್ಸಿಗೆ ಕಂತಂತಿದೆ. ಬೆಟ್ಟದ ನೆತ್ತಿಯ ಹೊತ್ತುಟ್ಟ ದಿಕ್ಕಲ್ಲಿ, ಎಡಕೊಂದು ಬಲಕೊಂದು ಸಣ್ಣ ಒರತೆ ವರ್ಷೊಂಬತ್ತು ಕಾಲ ಜಿನುಗುತ್ತಿರುತ್ತವೆ. ಮಳೆಗಾಲ ಬಂತೆಂದರೆ ಮೈದುಂಬಿಕೊಳ್ಳುತ್ತವೆ. ಹಸಿರು ರಾಶಿಯ ಮಧ್ಯೆ



